# ಪ್ರಥಮ ಭಾಷೆ ಕನ್ನಡ
## ವಿವಿಧ ರೀತಿಯ ಪ್ರಶ್ನೆಗಳಿಗೆ ಉದಾಹರಣೆಗಳು

**ಸಮಯ: 03 ಘಂಟೆಗಳು** **ಗರಿಷ್ಠ ಅಂಕಗಳು: 125**

**ಪ್ರಶ್ನೋತ್ತರ ಪತ್ರಿಕೆಯು ಬಹು ಆಯ್ಕೆ ಪ್ರಶ್ನೆಯ ಉಪಪ್ರಶ್ನೆಗಳು ಸೇರಿದಂತೆ ಒಟ್ಟು 67 ಪ್ರಶ್ನೆಗಳನ್ನು ಹೊಂದಿರುತ್ತದೆ.**

I. **ಕೆಳಗಿನ ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅದರಲ್ಲಿ ಸರಿಯಾದ ಉತ್ತರಗಳನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ:** **15x1=15**

1. 'ಟ' ವರ್ಗದ ಕೊನೆಯಲ್ಲಿರುವ ಅನುನಾಸಿಕಾಕ್ಷರ ಎ.ನ. ಬಿ.ಣ ಸಿ.ಮ. ಡಿ.ಙ
   ಉತ್ತರ:_______________
2. 'ಮೈದೂಳ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ:
   ಎ. ಆದೇಶ ಸಂಧಿ ಬಿ. ಗುಣಸಂಧಿ
   ಸಿ. ಲೋಪಸಂಧಿ ಡಿ. ಸವರ್ಣ ದೀರ್ಘಸಂಧಿ
   ಉತ್ತರ:_______________
3. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಆ ವಾಕ್ಯವು
   ಎ. ಸಾಮಾನ್ಯ ವಾಕ್ಯ ಬಿ. ಸಂಯೋಜಿತ ವಾಕ್ಯ
   ಸಿ. ಮಿಶ್ರ ವಾಕ್ಯ ಡಿ. ಅಲಂಕಾರಿಕ ವಾಕ್ಯ
   ಉತ್ತರ:_______________
4. 'ಬರೆದಾನು' ಪದವು ಕ್ರಿಯಾಪದದ ಈ ರೂಪದಲ್ಲಿದೆ
   ಎ. ವಿದ್ಯಾವರ್ಧಕ ಬಿ. ನಿಷೇಧಾರ್ಥಕ
   ಸಿ. ಸಂಭಾವನಾರ್ಥಕ ಡಿ. ಕ್ರಿಯಾರ್ಥಕ
   ಉತ್ತರ:_______________
5. 'ಶಾಲೆಯಲ್ಲಿ' ಈ ಪದದಲ್ಲಿರುವ ವಿಭಕ್ತಿ
   ಎ. ಪ್ರಥಮ ಬಿ. ತೃತೀಯ
   ಸಿ. ಸಪ್ತಮಿ ಡಿ. ಷಷ್ಠೀ
   ಉತ್ತರ:_______________
6. ಆವುದೀ ಶೀತಲ ಸುಖ ಸ್ಪರ್ಶ ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ
   ಎ. ಭಾವಸೂಚಕ ಬಿ. ಪ್ರಶ್ನಾರ್ಥಕ
   ಸಿ. ಅಲ್ಪವಿರಾಮ ಡಿ. ಪೂರ್ಣ ವಿರಾಮ
   ಉತ್ತರ:______________
7. ಚೆಲುವಿಕೆ ಈ ಪದದಲ್ಲಿರುವ ತದ್ಧಿತ ಪ್ರತ್ಯಯ
   ಎ. ಇಗೆ ಬಿ. ಇಕೆ
   ಸಿ. ಈಗ ಡಿ. ವಿಕೆ
   ಉತ್ತರ:_______________
8. 'ಕುಡಿ ಹುಬ್ಬು' ಪದವು ಈ ಸಮಾಸಕ್ಕೆ ಉದಾಹರಣೆ
   ಎ. ತತ್ಪುರುಷ ಬಿ. ದ್ವಂದ
   ಸಿ. ದ್ವಿಗು ಡಿ. ಅಂಶಿ
   ಉತ್ತರ:_______________

9. 'ಮಹೋಪಕಾರ' ಪದವು ಈ ಸಂಧಿಗೆ ಉದಾಹರಣೆ

ಎ. ಸವರ್ಣದೀರ್ಘ ಬಿ. ಗುಣ

ಸಿ. ಆದೇಶ ಡಿ. ಯಣ್

ಉತ್ತರ:_______________

10. ಸಂಜ್ಞಾ ಪದದ ತದ್ಭವ ರೂಪವಿದು

ಎ. ಸೊನ್ನೆ ಬಿ. ಶೂನ್ಯ

ಸಿ. ಸನ್ನೆ ಡಿ. ಸನ್ಸ್ಯಾ

ಉತ್ತರ:_______________

11. ಕುರುಡ ಪದವು ಈ ನಾಮಪದಕ್ಕೆ ಉದಾಹರಣೆ

ಎ. ರೂಢನಾಮ ಬಿ. ಅನ್ವರ್ಥನಾಮ

ಸಿ. ಅಂಕಿತನಾಮ ಡಿ. ಭಾವನಾಯ

ಉತ್ತರ:_______________

12. ನಂಬಿದರ್ಗೆ ಈ ಪದದ ಹೊಸಗನ್ನಡ ರೂಪ

ಎ. ನಂಬಿದವರಿಗೆ ಬಿ. ನಂಬದವರಿಗೆ

ಸಿ. ನಂಬುವವರಿಗೆ ಡಿ. ನಂಬಿದಾಗ

ಉತ್ತರ:_______________

13. ಲಕ್ಷಾಗೇಹ ಈ ಪದದ ಅರ್ಥ

ಎ. ಲಕ್ಷಾಗೇಹ ಬಿ. ಅರಗಿನ ಮನೆ

ಸಿ. ಅರಗಿನ ಅರಮನೆ ಡಿ. ಅರಸನ ಮನೆ

ಉತ್ತರ:_______________

14. ಬ್ಯಾಸಕಿ ಪದದ ಗ್ರಾಂಥಿಕ ರೂಪವಿದು

ಎ. ಬೇಸ್ಯಾರ ಬಿ. ಬ್ಯಾಸರ

ಸಿ. ಬೇಸರ ಡಿ. ಬೇಸಿಗೆ

ಉತ್ತರ:_______________

15. ಭುವನ ಪದವು ಈ ಗಣಕ್ಕೆ ಸೇರಿದೆ

ಎ. ಮ-ಗಣ ಬಿ. ನ-ಗಣ

ಸಿ. ಜ-ಗಣ ಡಿ. ತ-ಗಣ

ಉತ್ತರ:_______________

**II. ಅ-ಪಟ್ಟಿಯಲ್ಲಿರುವ ಪದಗಳಿಗೆ ಬಿ-ಪಟ್ಟಿಯಲ್ಲಿ ಹೊಂದುವ ಪದಗಳನ್ನು ಆರಿಸಿ ಹೊಂದಿಸಿ ಬರೆಯಿರಿ. 1x5=5**

16.

| 'ಅ' | 'ಬ' | ಉತ್ತರಗಳು |
|---|---|---|
| ಎ. ದಿವಾನ | 1. ಜೋಡುನುಡಿ | --------------------- |
| ಬಿ. ಕ್ಲಕ್ ಕ್ಲಕ್ | 2. ನುಡಿಗಟ್ಟು | --------------------- |
| ಸಿ. ಮಾರಣ ಹೋಮ | 3. ಇಂಗ್ಲಿಷ್ | --------------------- |
| ಡಿ. ಹಣ್ಣು-ಹಂಪಲು | 4. ದ್ವಿರುಕ್ತಿ | --------------------- |
| ಇ. ಹೇಳು ಹೇಳು | 5. ಪಡೆ ನುಡಿ | --------------------- |
| | 6. ಪರ್ಷಿಯನ್ | ---------------------- |
| | 7. ಅನುಕರಣಾವ್ಯಯ | ---------------------- |
| | 8. ಪೋರ್ಚುಗೀಸ್ | ---------------------- |

**III. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿಸಿ: 1x5=5**

17. ಮಂತ್ರ ವಿದ್ಯೆಯನರಿತ_____________________________

18. ಗೌರಿ ಹೆಜ್ಜೆ ಹಾಕಿದ ನೆಲದಲ್ಲಿ ___________________ ಬೆಳೆಯಿತು.

19. ವಿಧಾನಸೌಧ ಕಟ್ಟಡದ ವಿನ್ಯಾಸವನ್ನು ಅಂತಿಮವಾಗಿ ಗೊತ್ತುಮಾಡಿದವರು ____________________

20. ತುಂಗಸಾನು ವೊಳ್ ದೇವದಾರುಗಳ್ ___________________ ಹಿಮಶೈಲವೋ

21. ನೀರೊಳಗಿರ್ದುಂ ಬೆಮರ್ತ _____________________

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ:**

22. ಬುದ್ಧನ ಯಾವ ಮಾತು ಅಂಗುಲೀಮಾಲನಿಗೆ ಹೊಸದಾಗಿ ಕಂಡಿತು?

ಉತ್ತರ:_______________

23. ಮಂಜಪ್ಪನವರ ಕಾಲದಲ್ಲಿ ವಿದ್ಯಾರ್ಥಿಗಳ ಗುಲಿ ಏನಾಗಿದ್ದಿತು?

ಉತ್ತರ:_______________

24. ಪಶುಲೋಮನ ಪರಮ ಮಿತ್ರನಾರು?

ಉತ್ತರ:_______________

25. ಮೌರ್ಯರ ತಾಯಿಯ ಹೆಸರೇನು?

ಉತ್ತರ:_______________

26. ಮೊಲವು ಪುರಾಣಕೂಪದ ಬಳಿಗೆ ಏಕೆ ಹೋಯಿತು?

ಉತ್ತರ:_______________

27. ವ್ಯಾಸ ವಾಲ್ಮೀಕಿ ಭಾರತದ ಯಾವ ಭಾಗದವರು?

ಉತ್ತರ:_______________

28. ಯಾರು ಬಾಳು ಇದ್ದೂ ಸತ್ತಂತೆ?

ಉತ್ತರ:_______________

29. ಶಬರನಿಗೆ ವಿಚಿತ್ರವಾಗಿ ಕಂಡುದು ಯಾವುದು?

ಉತ್ತರ:_______________

30. ಶಿವ ಅರ್ಜುನನನ್ನು ಪರೀಕ್ಷಿಸಲು ಯಾವ ವೇಷದಲ್ಲಿ ಬಂದನು?

ಉತ್ತರ:_______________

31. ದುರ್ಯೋಧನನು ಎಲ್ಲಿ ಅಡಗಿಕೊಂಡಿದ್ದನು?

ಉತ್ತರ:_______________

**V. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 2x15=30**

32. ಅಳು ನಗು ಎರಡೂ ಪರಸ್ಪರ ವಿರುದ್ಧವಾದುವು ಹೇಗೆ?

33. ಅಂಗುಲೀಮಾಲ ತನ್ನ ಮುಂದಿರುವವನು ಬುದ್ಧನೆಂದು ತಿಳಿದಾಗ ಏನೆಂದು ಅರಿಕೆ ಮಾಡಿಕೊಂಡನು?

34. ಶಾಲಾ ನೋಟೀಸ್ ಬೋರ್ಡಿನಲ್ಲಿ ಬರೆಯಲಾಗಿದ್ದ ಸೂಚನೆಗಳಾವುವು?

35. ಬಿಡುವಿನ ಸಮಯದಲ್ಲಿ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು?

36. ವ್ಯಕ್ತಿತ್ವ ಮತ್ತು ನಡತೆಯನ್ನು ಸಿದ್ಧಿಸಿಕೊಳ್ಳುವ ಪರಿ ಎಂತು?

37. ಚಾಣಾಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳಾವುವು? ವಿವರಿಸಿರಿ.

38. ಪಶುಲೋಮನು ಇಂದ್ರಾದಿ ದೇವತೆಗಳಲ್ಲಿ ಏನೆಂದು ಬೇಡಿಕೊಂಡನು?

39. ವಯಿನಾದ ಹೆಂಡತಿ ಇದ್ದಾಗ ಆಗುವ ಅನುಕೂಲಗಳೇನು?

40. ಕವಿ ಭಾರತದ ಪ್ರಾದೇಶಿಕ ವಿಭಿನ್ನತೆಯನ್ನು ಹೇಗೆ ವರ್ಣಿಸಿದ್ದಾನೆ?

41. ರಕ್ತ ಮೀರಿದ ಸಂಬಂಧದ ಹಿನ್ನೆಲೆ ಯಾವುದು?

42. ಸತಿ, ಸ್ನೇಹ, ಬಯಕೆಗಳ ವಿಚಾರದಲ್ಲಿ ಕನಕದಾಸರ ಅಭಿಪ್ರಾಯವೇನು?

43. ಬೇಡ ವೇಷಧಾರಿಯಾದ ಶಿವ ಅರ್ಜುನನನ್ನು ಅಪಹಾಸ್ಯ ಮಾಡಿದುದೇಕೆ?

44. ದುರ್ಯೋಧನನ ಮೇಲೆ ಗದಾ ಪ್ರಹಾರ ಮಾಡುವಾಗ ಭೀಮ ಕೊಟ್ಟ ಕಾರಣಗಳನ್ನು ತಿಳಿಸಿರಿ?

45. ಲಕ್ಷ್ಮೀಧರಾಮಾತ್ಯನ ಶಾಸನ ಸೂಚಿಸಿರುವ ಲೋಕೋಪಕಾರಿ ಕಾರ್ಯಗಳಾವುವು?

46. ಹಲ್ಲಣ, ಬೆಲ್ಲ, ಹುಟ್ಟು, ಇವುಗಳ ಪ್ರಾಮುಖ್ಯತೆಯನ್ನು ಗೋಪಾಲದಾಸರು ಹೇಗೆ ವ್ಯಕ್ತಪಡಿಸಿದ್ದಾರೆ?

**VI. ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿರಿ: 3x5=15**

47. "ದೇವರು ನಮ್ಮ ತಪ್ಪುಗಳನ್ನು ಕ್ಷಮಿಸಿಯಾನು:

48. "ರಕ್ಷಣಾ ಪಡೆಗಳು ದೇಶದ ಏಕತೆ ಮತ್ತು ರಾಷ್ಟ್ರೀಯ ಭಾವೈಕ್ಯದ ಸಂಕೇತ"

49. "ಈ ಸಭಾಗೃಹದಲ್ಲಿಯ ಅರ್ಥವನ್ನು ಜನರು ಕತ್ತೆಗಳಲ್ಲ"

50. "ಮಾವು ಬೇವು ಫಲ ಬಲಾಬಲ"

51. "ದೇಶ ಕಳಿವಹುದಾರ ದೆಸೆಯಿಂದ"

**V. ಈ ಕೆಳಗಿನ ಸ್ಥಳ, ಕಾಲ ಕೃತಿಗಳನ್ನು ಕುರಿತು ಬರೆಯಿರಿ:** 3x2=6

52. ಹೆಚ್.ಜೆ. ಲಕ್ಕಪ್ಪಗೌಡ

53. ಪಂಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಣೆ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ:** 3x1=3

54. ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ

**VII. ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿರಿ:** 3x1=3

55. 'ಅಳುವ ಕಂದನ ತುಟಿಯ ಹವಳದ ಕುಡಿಯಂಗ'

**VIII. ಕೆಳಗಿನ ಗಾದೆ ಮಾತುಗಳನ್ನು ಯಾವುದಾದರೂ ಒಂದನ್ನು ಕುರಿತು ವಿಸ್ತರಿಸಿ ಬರೆಯಿರಿ :** 3x1=3

56. 1) ಊಟ ಬಲ್ಲವನಿಗೆ ರೋಗವಿಲ್ಲ ; ಮಾತು ಬಲ್ಲವನಿಗೆ ಜಗಳವಿಲ್ಲ
2) ತಾಳಿದವನು ಬಾಳಿಯಾನು
3) ಕಟ್ಟುವುದು ಕಠಿಣ ಕೆಡಿಸುವುದು ಸುಲಭ

**IX. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ:** 4x1=4

57. ಅಲರೊಳಗಡಗಿದ________________________________________
____________________________________________________
____________________________________________________
____________________________________________________ ವಾಯುವಿನಂತೆ

ಅಥವಾ

ಪರರ ಕಣ್ಣ ಕನ್ನಡಕದಲ್ಲಿ____________________________________
____________________________________________________
____________________________________________________
____________________________________________________ ದೀಪ್ತಿಯಲಿ ಬೆಳೆ

**X. ಕೆಳಗಿನ ಪದ್ಯ ಭಾಗದ ಸಾರಾಂಶವನ್ನು ಬರೆಯಿರಿ:** 4x1=4

58. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಗಳಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂನೊಂಡುತಂ
ಕೆಲವಂ ಸಜ್ಜ ಸಂಗದಿಂದಲರಿಯಲ್ ಸರ್ವಜ್ಞನಪಂ ನರ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ

**XI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರಿಸಿರಿ:** **4x2=8**

- ಲಿಪಿಯ ಉಗಮ ಹೇಗಾಯಿತು? ವಿವರಿಸಿರಿ.
- ತಡವಾಗಿ ಬಂದ ದೀರ್ಘಕರ್ಣನನ್ನು ಸಿಂಹವು ಪ್ರಶ್ನಿಸಿದ ಸಂದರ್ಭವನ್ನು ವಿವರಿಸಿರಿ
- ತಿಪ್ಪೇನಹಳ್ಳಿಗೆ ಪರಂಗಿ ಟೋಪಿ ಸಾಹೇಬರು ಭೇಟಿ ನೀಡಿದ ಪ್ರಸಂಗವನ್ನು ವಿವರಿಸಿರಿ

**XII. ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಕುರಿತು ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:** **4x1=4**

- ರಸಬಳ್ಳಿ ಪದ್ಯದಲ್ಲಿ ಹೆತ್ತತಾಯಿ ತನ್ನ ಮಗುವನ್ನು ಬಣ್ಣಿಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ
- ಅಜಗಣ್ಣನ ಯೋಗದ ಬಗೆಗೆ ಮುಕ್ತಾಯಕ್ಕನ ಅಭಿಪ್ರಾಯವನ್ನು ಸಂಗ್ರಹಿಸಿ ಬರೆಯಿರಿ

**XIII.**

62.ಬದಲಾಗುತ್ತಿರುವ SSLC ಪರೀಕ್ಷಾ ಪದ್ಧತಿಯನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿ ನಿಮ್ಮ ತಂದೆಗೆ ಪತ್ರ ಬರೆಯಿರಿ.

ಅಥವಾ **5x1=5**

ನಿಮ್ಮ ಪ್ರದೇಶದ ಬರಗಾಲ ವಿವರಿಸಿ, ಬರ ಪರಿಹಾರ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ವಿನಂತಿಸಿ ಒಂದು ಪತ್ರ ಬರೆಯಿರಿ.

**XIV.**

**63. ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** **5x1=5**

- ಹೆಚ್ 1 ಎನ್ 1 ಖಾಯಿಲೆಗೆ ಸಂಬಂಧಿಸಿದಂತೆ ಸರಕಾರ ವಹಿಸಬೇಕಾದ ಪಾತ್ರ
- ರಾಷ್ಟ್ರೀಯ ಹಬ್ಬಗಳ ಆಚರಣೆಯ ಮಹತ್ವ
- ಜನಸಂಖ್ಯಾ ಹೆಚ್ಚಳಕ್ಕೆ ಕಾರಣಗಳು